ಜೋಡಿಸಿ ಹೆಣೆಯುವಂತೆ ಕಾಣಿಸುತ್ತಿತ್ತು. ನಡುನಡುವೆ ತನ್ನಷ್ಟಕ್ಕೆ ತಾನೇ ಕಿರುನಗೆ ಬೀರುತ್ತಿದ್ದಳು. ಕೆಲವು ಸಮಯ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿ ನೋಟವನ್ನು ಯಾವ ವಸ್ತುವಿನ ಮೇಲೂ ನೆಡದೆ 'ನೋಡುತ್ತಲೇ' ಇರುತ್ತಿದ್ದಳು. ನಂತರ ಒಂದು ದೀರ್ಘವಾದ ನಿಟ್ಟುಸಿರು ಬಿಟ್ಟು ಮತ್ತೆ ಹೊಲಿಗೆಯಲ್ಲಿ ಮಗ್ನಳಾಗುತ್ತಿದ್ದಳು.

ಒಂದು ದಿನ ನಾಚ್ಚಿಯಾರ್ ಮನೆಗೆ ಹೋಗಿದ್ದೆ. ನನಗೆ ಒಂದು ಹೊಸ ನೇಗಿಲಹಗ್ಗ ಬೇಕಾಗಿತ್ತು. ಅವರ ಮನೆಯಲ್ಲಿ ಎಲ್ಲರೂ ಗದ್ದೆಯ ಕೆಲಸಕ್ಕೆ ಹೋಗಿದ್ದರು. ಅಡುಗೆ ಕೋಣೆಗೆ ಆತುಕೊಂಡು ಒಂದು ಉದ್ದನೆಯ ಹೆಂಚು ಹಾಕಿದ ಕಟ್ಟಡ ಇದೆ. ಅದರಲ್ಲಿ ಅಡ್ಡಾದಿಡ್ಡಿಯಾಗಿ ಬಹಳ ಕಣಜಗಳು ಇದ್ದವು. ಊದಲು, ಜೋಳ, ನವಣೆ, ಬರಗು ಮುಂತಾದ ಧಾನ್ಯಗಳನ್ನು ತುಂಬಿಕೊಂಡಿದ್ದವು. ಹೆಂಚಿನ ಚಾವಣಿಯ ಮರದ ಪಟ್ಟಿಗಳಿಗೆ ಹೊಸ ನೇಗಿಲಹಗ್ಗಗಳನ್ನು ಕಟ್ಟಿ ತೂಗುಹಾಕಿತ್ತು. ತೂಗುಬಿದ್ದ ಹಗ್ಗಗಳಿಗೆ ಮಣ್ಣಿನ ಹೆಂಚಿಗೆ ತೂತು ಹಾಕಿ ಪೋಣಿಸಿದ್ದರು. ಹಗ್ಗವನ್ನು ಕತ್ತರಿಸಿ ಇಳಿಸಿದರೆ ಅದರ ಮೂಲಕ ಇಲಿಗಳು ಕೆಳಗಿಳಿದು ಬಂದು ಬಿದ್ದವು. ಹೆಚ್ಚಾಗಿ ಓಡಾಟವಿಲ್ಲದ ಜಾಗವಾದ್ದರಿಂದ ಅಲ್ಲಿ ಚೇಳುಗಳು ಬಹಳ ಇರುತ್ತಿದ್ದವು. ಎಚ್ಚರಿಕೆಯಿಂದ ಕಣಜದ ಮೇಲೆ ಹತ್ತಿ ನಿಂತೆ. ಮಧ್ಯಾಹ್ನದ ಬಿಸಿಲಿಗೆ ಹೆಂಚಿನ ಶಾಖ ತಡೆಯಲಾಗಲಿಲ್ಲ. ಅಕಸ್ಮಾತ್ ಮತ್ತೊಂದು ಕಡೆ ತಿರುಗಿ ನೋಡಿದೆ. ಅಲ್ಲಿ ನೆಲದ ಮೇಲೆ ನಾಚ್ಚಿಯಾರ್ ಹಲಗೆಯೊಂದನ್ನು ತಲೆಗೆ ಒತ್ತುಕೊಟ್ಟು ನಿದ್ದೆ ಮಾಡುತ್ತಿದ್ದಳು! ಎದೆಯ ಮೇಲೆ 'ಅಲ್ಲಿ ಅರಸಾಣಿ ಮಾಲೈ' ಪುಸ್ತಕ ತೆರೆದಂತೆ ಮಗುಚಿತ್ತು. ಪಕ್ಕದಲ್ಲಿ ಕಂಚಿನ ಅಲುಗುಳಿಮನೆಯಲ್ಲಿ ಕವಡೆಗಳು ತುಂಬಿದ್ದವು. ಕಿಟಕಿಯ ಮೇಲೆ ಒಂದು ಚೊಂಬು. ಪಕ್ಕದಲ್ಲಿ ಒಂದು ಸಿಕ್ಕಟಿಕೆ, ಎರಡೂ ಕಡೆ ಹಲ್ಲುಗಳಿರುವ ಒಂದು ಮರದ ಬಾಚಣಿಗೆ, ಸೀರಣಿಗೆ, ಒಂದು ಒಡೆದ ಕನ್ನಡಿ ಮುಂತಾದವು ಇದ್ದವು. ಅವಳು ಗಾಢ ನಿದ್ದೆಯಲ್ಲಿದ್ದಳು. ಹಾಲು ಕರೆಯುವಾಗ ಪಾತ್ರೆ ತುಂಬಿ ಮೇಲೇಳುವ ನೊರೆಗೆ ಪೀಚುವ ಹಾಲಿನ ಶಬ್ದದಂತೆ ಸಣ್ಣ ಗೊರಕೆಯ ಸದ್ದು. ಅವಳು ನಿದ್ರಿಸುವ ಸೊಗಸನ್ನು ನೋಡುತ್ತಾ ಇದ್ದೆ. ದಟ್ಟವಾಗಿ ಉದ್ದಕ್ಕೆ ಬಾಗಿದ್ದ ರೆಪ್ಪೆಯ ರೋಮಗಳಿಂದ ಮುಚ್ಚಿದ್ದ ಅವಳ ಕಣ್ಣುಗಳು ಸುಂದರವಾಗಿದ್ದವು. ಮೆಲ್ಲಗೆ ಕೆಳಗಿಳಿದು ಹೋಗಿ ಆ ಮುಚ್ಚಿದ್ದ ಕಣ್ಣುಗಳ ಹುಬ್ಬುರೆಪ್ಪೆಯ ರೋಮಗಳ ನಡುವೆ ಮುತ್ತಿಡಬೇಕೆನಿಸಿತು.

ಅಂದುಕೊಂಡಂತೆ ನಾಚ್ಚಿಯಾರ್ ಕಣ್ಣು ತೆರೆದಳು. ನಿದ್ದೆಯಿಂದ ಕೆಂಪಾಗಿದ್ದ ಕಣ್ಣುಗಳನ್ನು ನೋಡಲು ಬಹಳ ಸುಂದರವಾಗಿದ್ದವು. ಕಣಜದ ಮೇಲೆ ನಿಂತಿದ್ದ ನನ್ನನ್ನು ಆ ಕ್ಷಣವೇ ನೋಡಿದಳು. 'ಇದೇನು ಅವಾಂತರ!' ಎಂಬಂತೆ ನಗುತ್ತಾ ನೋಡಿದಳು. ಅವಳು ಎದ್ದ ವೇಗಕ್ಕೆ ಪುಸ್ತಕ ಅವಳ ಕಾಲಡಿಯಲ್ಲಿ ಬಿತ್ತು. ಕೆಳಗೆ ಬಿದ್ದ ಪುಸ್ತಕವನ್ನು ಬೇಗನೆ ಎತ್ತಿಕೊಂಡು ಕಣ್ಣಿಗೆ ಒತ್ತಿಕೊಂಡು, ಅದನ್ನು ಕಿಟಕಿಯ ಮೇಲೆ ಇಟ್ಟಳು. ನಂತರ ಲಜ್ಜೆಯಿಂದ ನಗುತ್ತಾ ತಲೆತಗ್ಗಿಸಿಕೊಂಡೇ ಜಾರುತ್ತಿದ್ದ ಎದೆಯ ಸೆರಗನ್ನು ಬಲಗೈಯಿಂದ ಹೆಗಲ ಮೇಲೆ ಎಳೆದುಕೊಂಡು ಮೆಲ್ಲಗೆ ಆ ಜಾಗವನ್ನು ಬಿಟ್ಟು ಕದಲಿದಳು.

ಮದುವೆಗೆ ಮುಂಚೆಯೇ ನಾವು ಒಬ್ಬರನ್ನೊಬ್ಬರು ಪರಸ್ಪರ ಅರಿತುಕೊಂಡಿದ್ದೆವು. ಯಾರಿಗೂ ತಿಳಿಯದೆ ದೂರದಲ್ಲಿದ್ದುಕೊಂಡೇ ಗುಟ್ಟಾಗಿ ಪ್ರೀತಿಯಿಂದ ಕಲೆತೆವು. ಹೃದಯಗಳು ಒಂದಾಗಿ ಕುಣಿದವು. ನಮ್ಮೊಳಗೆ ಮಾತನಾಡದೆ ಉಳಿದ ರಹಸ್ಯಗಳು ಅನೇಕ!

ನನಗೆ ಏನು ಬೇಕೆಂಬುದನ್ನು ನಾನು ಹೇಳದಲೇ ಅವಳು ತಿಳಿಯುತ್ತಿದ್ದಳು. ಆಶ್ಚರ್ಯವೆಂದರೆ ಅವನ್ನು ಆಗಲೇ ಪೂರೈಸುತ್ತಿದ್ದಳು.

***

ಒಂದು ದಿನ ಕೋವಿಲ್ಪಟ್ಟಿಯಿಂದ ರಾತ್ರಿ ಮನೆಗೆ ಬಂದೆ. ಅಂದು ಬಹಳ ಸಾಮಾನುಗಳನ್ನು ಖರೀದಿಸಬೇಕಿತ್ತು. ಕಾಲ ಹಿಂದಿನಂತೆ ಇರಲಿಲ್ಲ. ದುಬಾರಿಯಾಗಿತ್ತು. ಮೊದಲೆಲ್ಲಾ ಸ್ವಲ್ಪ ಹಣ ತೆಗೆದುಕೊಂಡು ಹೋಗಿ ತುಂಬಾ ಸಾಮಾನುಗಳನ್ನು ಕೊಂಡು ತರಬಹುದಿತ್ತು. ಈಗ ತುಂಬಾ ಹಣ ತೆಗೆದುಕೊಂಡು ಹೋಗಿ ಸ್ವಲ್ಪ ಸಾಮಾನುಗಳನ್ನೇ ತರಲು ಸಾಧ್ಯವಾಗುತ್ತದೆ.

ಬಂದ ಕೂಡಲೇ ಸಾಮಾನುಗಳನ್ನೆಲ್ಲ ಗಾಡಿಯಿಂದ ಇಳಿಸಿ ಕೆಳಗಿಟ್ಟು ಹಣದ ಚೀಲವನ್ನೂ ರಶೀದಿಗಳನ್ನೂ ನಾಚ್ಚಿಯಾರ್ ಬಳಿಕೊಟ್ಟು ಬಂದು ಮಂಚದ ಮೇಲೆ ಬಿದ್ದುಕೊಂಡೆ. ದೇಹವೆಲ್ಲಾ ತುಂಬಾ ನೋವು. ಕಣ್ಣು ಉಷ್ಣವನ್ನು ಕಕ್ಕುತ್ತಿತ್ತು. ತಲೆಬುರುಡೆಯೊಳಗೆ ಹಾರೆಯನ್ನು ಇಳಿಸಿದಂತೆ ಸಿಡಿಯುತ್ತಿತ್ತು. ಕಂಬಳಿಯನ್ನು ಎಳೆದು ಹೊದ್ದುಕೊಂಡೆ. ಮಕ್ಕಳು ಗಾಢ ನಿದ್ದೆಯಲ್ಲಿದ್ದವು. ಅರಿಕೇನ್ ದೀಪವನ್ನು ಒರಸಿ ಬತ್ತಿಯನ್ನು ಸರಿಯಾಗಿ ಕತ್ತರಿಸಿಬಿಡದೇ ಇರುವುದರಿಂದ ಸೊಡರು ಅರ್ಧಚಂದ್ರಾಕಾರದಲ್ಲಿ ಉರಿಯುತ್ತಿತ್ತು. ಚಿಮಣಿಯಲ್ಲಿ ಹೊಗೆಯಾಡಲು ತೊಡಗಿತು.

ಆ ಬೆಳಕಿನಲ್ಲಿ ಅವಳು ರಶೀದಿಗಳ ಮೊತ್ತವನ್ನು ಕೂಡಿಸುತ್ತಾ, ಉಳಿದ ಹಣವನ್ನು ಎಣಿಸುತ್ತಾ ಲೆಕ್ಕ ನೋಡುತ್ತಿದ್ದಳು.

ಲೆಕ್ಕದಲ್ಲಿ ಐದು ರೂಪಾಯಿ ಚಿಲ್ಲರೆ ಏರುಪೇರಾಗಿದೆ. ಆ ರೂಪಾಯಿಗೆ ಏನು ಲೆಕ್ಕ ಎಂದು ನನ್ನ ಬಳಿ ಕೇಳಿದಳು.

'ಎಲ್ಲವನ್ನೂ ತೆಗೆದಿಡು,
ಲೆಕ್ಕ ಎಲ್ಲೂ ಹೋಗಲ್ಲಾ,
ಬೆಳಗ್ಗೆ ಎಲ್ಲವನ್ನೂ ನೋಡಿಕೊಳ್ಳೋಣ.'

ಅವಳು ಹಟದಿಂದ ಲೆಕ್ಕವನ್ನೂ ನೋಡುತ್ತಿದ್ದಳು.


ನನಗೆ ಕಣ್ಣು ಬಿಡಲಾಗಲಿಲ್ಲ. ಮುಚ್ಚಿಕೊಂಡೇ ಇರಬೇಕೆನಿಸಿತು. ನನ್ನ ಹಣೆ ಹಿತವಾದ ಬೆರಳುಗಳ ನೇವರಿಕೆಗೆ ತವಕಿಸಿತು. ಮೂಗಿನ ಹೊಳ್ಳೆಯ ಕೂದಲು ಕರಕಲಾಗುವಂತೆ ಬಿಸಿಗಾಳಿ ನನ್ನಿಂದ ಹೊರಹೊಮ್ಮಿತು. ಒಳ್ಳೆಯ ಜ್ವರ.

ಸುತ್ತಲಿನ ಪ್ರಜ್ಞೆ ಕಡಿಮೆಯಾಗಿತ್ತು. ಮೆಲ್ಲನೆಯ ಸಣ್ಣ ಶಬ್ದಗಳೂ ಕರ್ಕಶವಾಗಿ ಕೇಳಿಸಿದವು. ಕಣ್ಣು ತೆರೆದು ನಾಚ್ಚಿಯಾರ್ ಏನು ಮಾಡುತ್ತಿದ್ದಾಳೆ ಎಂದು ನೋಡಿದೆ. ಅವಳು ರೂಪಾಯಿ, ಆಣೆ, ಪೈಸೆಯಲ್ಲಿ ಮುಳುಗಿದ್ದಳು. ತಣ್ಣನೆಯ ಗಾಳಿ ತಾಕಿದ್ದರಿಂದ ಕಣ್ಣಲ್ಲಿ ನೀರು ತುಂಬಿತು. ಒರಸಿಕೊಳ್ಳಲು ಕೈಯನ್ನು ಎತ್ತಲೂ ಇಷ್ಟವಾಗಲಿಲ್ಲ. ರೆಪ್ಪೆಗಳನ್ನು ಮುಚ್ಚಿ ಅವನ್ನು ಹೊರಹಾಕಿದೆ. ಮತ್ತೆ ನಾಚ್ಚಿಯಾರನ್ನು ನೋಡಿದೆ. ಅವಳ ರವಿಕೆಯ ಬಿಚ್ಚಿದ ದಾರ ಗಂಟು ಹಾಕಿ ಮುಚ್ಚದೇ ತೂಗುತ್ತಿದ್ದವು. ಕೂದಲನ್ನು ಎಳೆದು ಬಿಗಿಯಾಗಿ ಕಟ್ಟಿದ್ದರಿಂದ ಮುಂಗುರುಳುಗಳು ಮುಖದ ಮೇಲೆ ಬಂದು ಬಿದ್ದಿದ್ದವು.

ಈ ಕಣ್ಣುಗಳನ್ನು ಮುಚ್ಚಿಕೊಂಡಿರುವುದರಲ್ಲಿ ಎಂತಹ ಸಂತೋಷವಾದ 'ಸುಖ'! ಬೆಂಕಿಯ ಜ್ವಾಲೆಯಂತೆ ನನ್ನ ದೇಹದಿಂದ ಮೇಲೇಳುವ ಬಿಸಿ ಅಲೆಗಳನ್ನು ಕಣ್ಣಿಂದ ನೋಡಲಾಗದಿದ್ದರೂ ಅನುಭವಕ್ಕೆ ಬಂದವು. ನಾನು ಉರಿಯುತ್ತಿದ್ದೇನೆ. ಒಂದು ಚಿತೆಯಲ್ಲಿ ಮಲಗಿರುವಂತೆ ಚಳಿಗೆ ಹಿತವಾಗಿತ್ತು. ತುಂಬು ಜ್ವರದ ಕನವರಿಕೆ ಎಡೆಬಿಡದೆ ಮೀಟುವ ಶ್ರುತಿಯಂತೆ ಲಯ ಹಿಡಿದಿತ್ತು. ಈ ಸಂತೋಷದಲ್ಲಿ ಭಾಗಿಯಾಗಲು ನನಗೊಂದು ಜತೆ ಬೇಕೆನಿಸಿತು. ಅವಳು ಎಲ್ಲಿ? ಅವಳೇ ನನ್ನ ಮೋಹದ ನಾಚ್ಚಿಯಾರ್. 'ನಾಚ್ಚಿಯಾರ್, ನನ್ನ ಪ್ರಿಯತಮೆ! ನೀನು ಎಲ್ಲಿದ್ದೀಯಾ?'

ಪ್ರತಿಕ್ರಿಯಿಸಿ: feedback@sudha.co.in

**ಕಿ. ರಾಜನಾರಾಯಣನ್**



ಜನನ: ಸೆ. 16, 1923. ತಮಿಳುನಾಡಿನ ಕೋವಿಲ್ಪಟ್ಟಿ ಸಮೀಪದ ಇಡೈಸೆವಲ್ ಎಂಬ ಹಳ್ಳಿಗೆ ಸೇರಿದವರು. ಇವರ ಪೂರ್ತಿ ಹೆಸರು ರಾಯಂಕುಲ ಶ್ರೀ ಕೃಷ್ಣರಾಜ ನಾರಾಯಣ ಪೆರುಮಾಳ್ ರಾಮಾನುಜ ನಾಯಕ್ಕರ್. ರಾಜನಾರಾಯಣನ್ ವೃತ್ತಿಯಲ್ಲಿ ಒಬ್ಬ ರೈತರು. 'ನಾನು ಮಳೆಯಿಂದ ತಪ್ಪಿಸಿಕೊಳ್ಳಲು ಶಾಲೆಯ ಕಡೆ ಹೋದವನು. ಶಾಲೆಯನ್ನು ನೋಡದೆ ಮಳೆಯನ್ನೇ ನೋಡುತ್ತಾ ನಿಂತುಬಿಟ್ಟೆ' ಎಂದು ತಮ್ಮ ಬಗ್ಗೆ ಹೇಳಿಕೊಂಡವರು. ಪಾಂಡಿಚೇರಿ ವಿಶ್ವವಿದ್ಯಾಲಯದಲ್ಲಿ ಅತಿಥಿ ಪ್ರಾಧ್ಯಾಪಕರಾಗಿದ್ದ ಹೆಮ್ಮೆ ಇವರಿಗೆ ಸಲ್ಲುತ್ತದೆ.

24 ಸಣ್ಣಕಥೆಗಳ ಸಂಕಲನಗಳು, 3 ಕಾದಂಬರಿಗಳು, 2 ಕಿರು ಕಾದಂಬರಿಗಳು, 7 ಅಂಕಣ ಸಂಕಲನಗಳು ಪ್ರಕಟವಾಗಿವೆ. ಅನೇಕ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ. 1991ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾದವರು. ತಮ್ಮ 99ನೇ ವಯಸ್ಸಿನಲ್ಲಿ ಮೇ 17, 2021ರಂದು ಪಾಂಡಿಚೇರಿಯಲ್ಲಿ ನಿಧನ ಹೊಂದಿದರು. ಈ ಸೆಪ್ಟೆಂಬರ್ ತಿಂಗಳಿಂದ ಇವರ ಶತಮಾನೋತ್ಸವಕ್ಕೆ ಚಾಲನೆ ದೊರೆತಿದ್ದು, ಒಂದು ವರ್ಷ ಕಾಲ ಆಚರಣೆ ನಡೆಯಲಿದೆ.